ತಿಪ್ಪಗೊಂಡನಹಳ್ಳಿಗೆ ಸೇರಿದ ಜಮೀನನ್ನು ಪಡೆಯಲು ಬಂದಿರುವ ಅರ್ಜಿಗಳು.

೧೫೪೪. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಿಪ್ಪಗೊಂಡನಹಳ್ಳಿಗೆ ಸೇರಿದ ಒಟ್ಟು ಜಮೀನಿನ ವಿಸ್ತೀರ್ಣವೆಷ್ಟು (ಕೆರೆಯ ಜಮೀನಿನ ವಿಸ್ತೀರ್ಣವು ಸೇರಿದಂತೆ ನೀಡುವುದು)

ಆ) ಈ ಜಮೀನನ್ನು ಪಡೆಯಲು ಎಷ್ಟು ಸಂಘ ಸಂಸ್ಥೆಗಳಿಂದ ಬೇಡಿಕೆಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು (ಬೇಡಿಕೆ ಬಂದ ಎಲ್ಲಾ ಸಂಘ ಸಂಸ್ಥೆಗಳ ವಿವರವನ್ನು ನೀಡುವುದು)

ಇ) ಸದರಿ ಬೇಡಿಕೆಯಲ್ಲಿ ಹರಿಜನ ಗಿರಿಜನ ಸಂಘ ಸಂಸ್ಥೆಗಳಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ?

ಈ) ಸದರಿ ಜಮೀನಿನ ಬೇಡಿಕೆಯ ಬಗ್ಗೆ ತಹಲಿಯ ನಾಗರಿಕರಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ?

ಉ) ತಿಪ್ಪಗೊಂಡನಹಳ್ಳಿಗೆ ಸಂಬಂಧಪಟ್ಟ ಜಾಗವನ್ನು ಬೇರೆಯವರಿಗೆ ಪರಾಧೀನ ಮಾಡುವ ಅಥವಾ ಬಡಜನರಿಗಾಗಿ ಮೀಸಲಾಗಿಡುವ ಉದ್ದೇಶವಿದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

ಅ) ತಿಪ್ಪಗೊಂಡನಹಳ್ಳಿ ಕೆರೆಯ ಜಮೀನೂ ಸೇರಿದರೆ ತಿಪ್ಪಗೊಂಡನಹಳ್ಳಿ ಗ್ರಾಮದ ಒಟ್ಟು ವಿಸ್ತೀರ್ಣ ೪೮೪ ಎಕರೆ ೩೦ ಗುಂಟೆ. ಇದರಲ್ಲಿ ೩೬೮-೨೧ ಎಕರೆ ಸರ್ಕಾರಿ ಜಮೀನು ಮುಳುಗಡೆಯಾಗಿರುತ್ತದೆ. ೭೨-೦೮ ಎಕರೆ ಹಿಡುವಳಿ ಜಮೀನಾಗಿರುತ್ತದೆ. ಇದರಲ್ಲಿ ೫೫-೨೦ ಗುಂಟೆ ಜಮೀನನ್ನು ೧೫೭-೪೪ರಲ್ಲಿ ೩ ಜನರಿಗೆ ಮಂಜೂರು ಮಾಡಲಾಗಿದೆ. ಉಳಿದ ೩೯-೧೧ ಎಕರೆ ಪ್ರದೇಶದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ೩೬೦ ವಸತಿ ಗೃಹಗಳು ನಿರ್ಮಿಸಲಾಗಿವೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ತಿಪ್ಪಗೊಂಡನಹಳ್ಳಿ ಗ್ರಾಮದಲ್ಲಿ ಕಂದಾಯ ಇಲಾಖೆಗೆ ಸೇರಿದ ಜಮೀನು ಇರುವುದಿಲ್ಲ. ಹಿಂದೆ ಇದ್ದ ಗೋಮಾಳದ ಜಮೀನು ತಿಪ್ಪಗೊಂಡನಹಳ್ಳಿ ಜಲಾಯನ ಪ್ರದೇಶದಲ್ಲಿ ಮುಳುಗಡೆಯಾಗಿರುತ್ತದೆ. ಆದ್ದರಿಂದ ಬೇರೆಯವರಿಗೆ ಪರಭಾರೆ ಮಾಡುವ ಅಥವಾ ಬಡಜನರಿಗೆ ಮೀಸಲಿಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕದಲ್ಲಿರುವ ಅಂಗನವಾಡಿಗಳು.

೧೪೬೬. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ). —ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ರಾಜ್ಯದಲ್ಲಿ ಎಷ್ಟು ಅಂಗನವಾಡಿಗಳಿವೆ ಮತ್ತು ಒಂದು ಅಂಗನವಾಡಿಗೆ ಖರ್ಚಾಗುವ ಹಣವೆಷ್ಟು ?

೨) ಈ ಹಣವನ್ನು ಕೇಂದ್ರ ಸರ್ಕಾರದಿಂದ ಪಡೆಯುತ್ತಿರೋ ಅಥವಾ ರಾಜ್ಯ ಸರ್ಕಾರದವರು ಕೊಡುತ್ತಿರುವರೇ ?